# ಆಹಾ ಸುದ್ದಿ!

★ ಸಸಿತೋಟ

ಅಂಗಡಿಗಳಲ್ಲಿ, ಹೋಟೆಲ್‌ಗಳಲ್ಲಿ ಸಂಗೀತವನ್ನು ಹಾಕಿ ಅವರು ಇನ್ನಷ್ಟು ಖರೀದಿಸುವಂತೆ, ತಿನ್ನುವಂತೆ ಮಾಡುವುದು ಒಂದು ಚಮತ್ಕಾರದ ಕೆಲಸ. ಆದರೆ ಈಗ ಸಂಗೀತವು ಕಂಪೆನಿ ಉದ್ಯೋಗಿಗಳು ಹೆಚ್ಚು ಕೆಲಸ ಮಾಡಲು ಪ್ರೇರಣೆ ನೀಡುತ್ತದೆ ಎಂದು ಅಮೆರಿಕಾದ ಕಾರ್ನೆಲ್ ವಿಶ್ವವಿದ್ಯಾನಿಲಯದಲ್ಲಿ ಕಂಡು ಹಿಡಿದಿದ್ದಾರಂತೆ. ಡೆಸ್ಕ್ ಟಾಪ್ ಕಂಪ್ಯೂಟರ್‌ಗೆ ವೈರ್ ಸಿಕ್ಕಿಸದಿದ್ದರೂ ಅಡ್ಡಿಯಿಲ್ಲ, ಕಿವಿಗಳಿಗೆ ವೈರ್ ಸಿಕ್ಕಿಸಿಕೊಳ್ಳಿ ಎಂದು ಕಂಪೆನಿ ಮಾಲೀಕರೇ ಹೇಳುವ ದಿನ ದೂರವಿಲ್ಲ!



ಕೆನಡಾದ ಕೊಳಾಯಿ ರಿಪೇರಿ ಮಾಡುವ ಹಕ್ಸನ್ ತನ್ನ ಟ್ರಕ್ ಮೇಲೆ ಶೌಚಾಲಯ ಚಿತ್ರ ಬಿಡಿಸಿದ್ದು, ಈಗ ಆತನಿಗೆ ಪುರುಸೊತ್ತೇ ಇಲ್ಲದಷ್ಟು ಕೆಲಸದ ಬೇಡಿಕೆ ಬರುತ್ತಿದೆಯಂತೆ. ಈ ಚಿತ್ರದಿಂದಾಗಿ ರಾತ್ರಿ ಬೆಳಗಾಗುವುದರೊಳಗೆ ಖ್ಯಾತಿ ಪಡೆದ ಹಕ್ಸನ್ ಸೃಜನಶೀಲತೆ ಶೌಚಾಲಯದಲ್ಲಿ ಅಡಗಿದ ಬಗ್ಗೆ ಹಲವರು ಮೂಗಿಗಡ್ಡ ಬೆರಳು ಹಿಡಿದಿರಬಹುದು.

ಭಾರತೀಯ ವಾಯುದಳದ ಪರೀಕ್ಷೆಯಲ್ಲಿ ನಟಿ ದೀಪಿಕಾ ಪಡುಕೋಣೆಯ ಬಗ್ಗೆ ಪ್ರಶ್ನೆ ಕೇಳಲಾಗಿದೆಯಂತೆ. ಆಕೆ ಈ ವರ್ಷ ಯಾವ ಸಿನಿಮಾದ ನಟನೆಗಾಗಿ ಫಿಲ್ಮ್‌ಫೇರ್ ಪ್ರಶಸ್ತಿ ಗಿಟ್ಟಿಸಿಕೊಂಡಳು ಎಂಬುದು ಆ ಪ್ರಶ್ನೆಯಂತೆ. ಬಹಳ ಕಠಿಣ ಪ್ರಶ್ನೆಯೇ! ನಿಮಗೆ ಗೊತ್ತೇ ಇದಕ್ಕೆ ಉತ್ತರ ಎಂಬುದು ಈಗ ಟ್ವಿಟರ್‌ನಲ್ಲಿ ಓಡಾಡುತ್ತಿದೆ.



ಕೋಲ್ಕತ್ತಾದ ಈ ಸಾಧು ಶಿವಾನಂದಗೆ 120 ವರ್ಷ ವಯಸ್ಸಂತೆ. ಈ ವಯಸ್ಸಲ್ಲೂ ಯೋಗ ಮಾಡುವ ಈತ ತನ್ನ ದೀರ್ಘಾಯಸ್ಸಿನ ರಹಸ್ಯ ಯೋಗದ ಸಾನಿಧ್ಯ ಹಾಗೂ ಲೈಂಗಿಕತೆ ಮತ್ತು ಸಂಬಾರ ಪದಾರ್ಥಗಳ ವರ್ಜ್ಯ ಎಂದು ಘೋಷಿಸಿಕೊಂಡಿದ್ದು, ಗಿನ್ನೆಸ್ ದಾಖಲೆಗೆ ಅರ್ಜಿ ಸಲ್ಲಿಸಿದ್ದಾನಂತೆ. ಬದುಕಿನ ಮಸಾಲೆಯ ಮೇಲೆ ಇಲ್ಲದ ಆಸೆ ದಾಖಲೆಯ ಮೇಲ್ಯಾಕೋ!



ಬೆಲ್ಜಿಯಂನಲ್ಲಿ ಮನೆಮನೆಯಲ್ಲೂ ಬಿಯರ್ ತಯಾರಿಸಿಕೊಂಡು ಕುಡಿಯುವವರ ಕ್ಲಬ್ ಹುಟ್ಟಿಕೊಂಡಿದೆಯಂತೆ. ಮನೆಯ ಗ್ಯಾರೇಜ್‌ನಲ್ಲಿ, ತಳ ಮಹಡಿಯಲ್ಲಿ ಬಿಯರ್ ಕಂಪು ಸಾಮಾನ್ಯವಂತೆ. ಇಡೀ ಪ್ರಪಂಚವೇ ಓಲಾಡುತ್ತಿದೆ ಎನ್ನುವ ಬದಲು ಇಡೀ ಮನೆಯೇ ತೂಗಾಡುತ್ತಿದೆ ಎಂಬ ಸಣ್ಣ ವ್ಯತ್ಯಾಸವಷ್ಟೆ.

ವಾಷಿಂಗ್ಟನ್ನಿನ ಈ ವೃದ್ಧ ದಂಪತಿ ಈಡ್ ಮತ್ತು ಫ್ರಾನ್ ಕಳೆದ 52 ವರ್ಷಗಳಿಂದ ನಿತ್ಯ ಮ್ಯಾಚಿಂಗ್ ಉಡುಪು ಧರಿಸುತ್ತಿದ್ದಾರಂತೆ. ತಮ್ಮ ಮೊಮ್ಮಗನಿಗೆ ನಿತ್ಯ ಶುಭ ಮುಂಜಾವು ಹೇಳುವುದರ ಜೊತೆ ಅಂದಿನ ಉಡುಪು ಯಾವ ರೀತಿಯದ್ದು ಎಂಬ ಬಗ್ಗೆ ಮಾಹಿತಿ ನೀಡುತ್ತಾರಂತೆ. ವಯಸ್ಸು 70 ದಾಟಿದ್ದರೂ ಇನ್ನೂ ಒಟ್ಟಿಗೇ ಇರುವುದರ ಹಿಂದಿನ ರಹಸ್ಯ ಮ್ಯಾಚಿಂಗ್ ಉಡುಪು ಎಂಬ ಬಗ್ಗೆ ಅಧ್ಯಯನ ನಡೆಸಲು ಇನ್ನೂ ಯಾವ ಸಂಶೋಧಕರು ಹಿಂದೆ ಬಿದ್ದಿಲ್ಲವೇನೋ!

